ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ:080-22372162, E-mail:karnregs@gmail.com
Web Site :- http://www.karnregs.kar.nic.in

ಸಂಖ್ಯೆ ಗ್ರಾಅಫ 1091 ಉಖಾಯೋ 2014 ದಿನಾಂಕ 28-01-2015

**ಅನಧಿಕೃತ ಟಿಪ್ಪಣಿ**

**ವಿಷಯ:** ಮಹಾತ್ಮ ಗಾಂಧಿ ನರೇಗಾ ಯೋಜನೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇತರೆ ಯೋಜನೆಗಳಗಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳಗೆ ಪಟ್ಟಿಯಲ್ಲಿ ಸೇರಿಸಲು (Empanelment of District Quality Monitors) (DQM) ಅರ್ಜಿಗಳ ಆಹ್ವಾನ.

**ಉಲ್ಲೇಖ:** ಈ ಕಛೇರಿ ನೇರ ಸಂದರ್ಶನ ಪ್ರಕಟಣೆ ಸಂಖ್ಯೆ ಗ್ರಾಅಪ 1091 ಉಖಾಯೋ 2014 ದಿನಾಂಕ: 27-01-2015.

*****

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಮೇಲಿನ ವಿಷಯಕ್ಕೆ ನೇರ ಸಂದರ್ಶನದ ಪ್ರಕಟಣೆಯನ್ನು ಇದರೊಂದಿಗೆ ಲಗತ್ತಿಸಿದೆ. ಈ ಪ್ರಕಟಣೆಯನ್ನು ರಾಜ್ಯ ಮಟ್ಟದ ಕನ್ನಡ ದಿನಪತ್ರಿಕೆಯಾದ ವಿಜಯ ಕರ್ನಾಟಕ ಮತ್ತು ಪ್ರಜಾವಾಣಿ ದಿನಪತ್ರಿಕೆಗಳಲ್ಲಿ ಅತ್ಯಂತ ಕನಿಷ್ಠ ಅಳತೆಯಲ್ಲಿ ದಿನಾಂಕ:31-01-2015 ರಂದು ಪ್ರಕಟಿಸಲು ಕೋರಿದೆ ಮತ್ತು ಇಲಾಖೆಯ ವೆಬ್‌ಸೈಟ್‌ನಲ್ಲಿ ಈ ಜಾಹೀರಾತನ್ನು ಅಪ್‌ಲೋಡ್ ಮಾಡಲು ತಿಳಿಸಿದೆ.

28/1/2015
ನಿರ್ದೇಶಕರು,
(ಗುಣನಿಯಂತ್ರಣ, ದೂರುಗಳು & ಜಾಗೃತ)
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ,**
ಸಂಪಾದಕರು ಕರ್ನಾಟಕ ವಿಕಾಸ ಮತ್ತು
ಸಾರ್ವಜನಿಕ ಸಂಪರ್ಕಾಧಿಕಾರಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು**

1. ವಿಶೇಷ ಅಧಿಕಾರಿಗಳು, ಗಣಕಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಮಾಹಿತಿಗೆ ಹಾಗೂ ಈ ಪ್ರಕಟಣೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಆರೋಹಣ ಮಾಡಲು ತಿಳಿಸಿದೆ.
2. ಎಂ.ಐ.ಎಸ್ ಶಾಖೆ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರ ಮಾಹಿತಿಗೆ ಹಾಗೂ ಈ ಪ್ರಕಟಣೆಯನ್ನು end2endnrega.in ವೆಬ್‌ಸೈಟ್‌ನಲ್ಲಿ ಆರೋಹಣ ಮಾಡಲು ತಿಳಿಸಿದೆ.
3. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಇವರ ಮಾಹಿತಿಗಾಗಿ
4. ಜಂಟಿ ನಿರ್ದೇಶಕರು ,ಆಡಳಿತ/ತಾಂತ್ರಿಕ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಇವರ ಮಾಹಿತಿಗಾಗಿ.

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ:080-22372162, E-mail:karnregs@gmail.com
**Web Site :-** http://www.karnregs.kar.nic.in

ಸಂಖ್ಯೆ ಗ್ರಾಅಪ 1091 ಉಖಾಯೋ 2014 ದಿನಾಂಕ 28-01-2015

## ನೇರ ಸಂದರ್ಶನ

**ಮಹಾತ್ಮ ಗಾಂಧಿ ನರೇಗಾ ಯೋಜನೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇತರೆ ಯೋಜನೆಗಳಗಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳಗೆ ಪಟ್ಟಿಯಲ್ಲಿ ಸೇರಿಸಲು <u>(Empanelment of District Quality Monitors) (DQM)</u> ಅರ್ಜಿಗಳ ಆಹ್ವಾನ.**

ಮಹಾತ್ಮ ಗಾಂಧಿ ನರೇಗಾ ಯೋಜನೆಯನ್ನು ಮತ್ತು ಇತರೆ ಗ್ರಾಮೀಣ ಅಭಿವೃದ್ಧಿ ಯೋಜನೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅನುಷ್ಠಾನ ಮಾಡುತ್ತಿದೆ. ನರೇಗಾ ಯೋಜನೆಯು ಒಂದು ಕೇಂದ್ರ ಪ್ರಾಯೋಜಿತ ಕಾರ್ಯಕ್ರಮವಾಗಿದ್ದು, ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಒಂದು ಬೃಹತ್ ಯೋಜನೆಯಾಗಿರುತ್ತದೆ. ಮತ್ತು ಈ ಯೋಜನೆಯಿಂದ ದೀರ್ಘಕಾಲದ ಬಾಳಿಕೆ ಬರುವ ಆಸ್ತಿಗಳನ್ನು ಸೃಷ್ಟಿಸಿ ಗ್ರಾಮೀಣ ಜನರ ಜೀವನಾಧರಕ್ಕೆ ಆಹಾರ ಭದ್ರತೆಯನ್ನು ಒದಗಿಸಲು ಬಲಪಡಿಸದಂತಾಗುತ್ತದೆ. ಪ್ರಯುಕ್ತ ಇಲಾಖೆಯು ಜಿಲ್ಲಾ ಮಟ್ಟದಲ್ಲಿ ಗುಣ ನಿಯಂತ್ರಣ ಮಾನಿಟರ್‌ಗಳನ್ನು ಪಟ್ಟಿಯಲ್ಲಿ ಸೇರಿಸಿ, **<u>(Empanelment of District Quality Monitors) (DQM)</u>** ಅವರುಗಳ ಸೇವೆಯನ್ನು ದಾಖಲಿಸಿಕೊಳ್ಳುವ ಸಲುವಾಗಿ ಸಿವಿಲ್ ಇಂಜಿನಿಯರಿಂಗ್/ಅರಣ್ಯ/ಕೃಷಿ/ತೋಟಗಾರಿಕೆ ಹಿನ್ನಲೆ ಇರುವ ನಿವೃತ್ತ ಹಿರಿಯ ಅಧಿಕಾರಿಗಳನ್ನು ಪಡೆಯಲು ಇಚ್ಛಿಸಿದೆ. ಆದ್ದರಿಂದ ಅರ್ಹತೆ ಮತ್ತು ಆಸಕ್ತಿ ಇರುವ ಅಭ್ಯರ್ಥಿಗಳು ವಿವರಗಳೊಂದಿಗೆ ನೇರ ಸಂದರ್ಶನಕ್ಕಾಗಿ ಹಾಜರಾಗಲು ಕೋರಿದೆ.

| ಕ್ರ.ಸಂ | ನೇರಸಂದರ್ಶನದ ದಿನಾಂಕ ಮತ್ತು ವೇಳೆ | ನೇರ ಸಂದರ್ಶನದ ಸ್ಥಳ |
|---|---|---|
| 1 | ದಿನಾಂಕ 20-02-2015 ಬೆಳಗ್ಗೆ 11 ಘಂಟೆಯಿಂದ | ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಡಾ॥ ಅಂಬೇಡ್ಕರ್ ವೀದಿ. ಬೆಂಗಳೂರು-560001. |

28/1/15

ಗುಣ ನಿಯಂತ್ರಣ ಮಾನಿಟರ್‌ಗಳ ಎಂಪ್ಯಾನೆಟಲ್‌ಮೆಂಟ್‌ಗೆ ಬೇಕಾಗುವ ವಿವರ:-

| ಕ್ರ. ಸಂ | ಜಿಲ್ಲೆ | ಸಿವಿಲ್ ಇಂಜಿನಿಯರಿಂಗ್ ಹಿನ್ನಲೆಯಿರುವ ಅಭ್ಯರ್ಥಿಗಳ ಸಂಖ್ಯೆ | ಅರಣ್ಯ/ಕೃಷಿ/ ತೋಟಗಾರಿಕೆ ಹಿನ್ನಲೆಯಿರುವ ಅಭ್ಯರ್ಥಿಗಳ ಸಂಖ್ಯೆ | ಬೇಕಾಗುವ ಒಟ್ಟು ಅಭ್ಯರ್ಥಿಗಳ ಸಂಖ್ಯೆ (3+4) |
|---|---|---|---|---|
| 1 | 2 | 3 | 4 | 5 |
| 1 | ಬೆಂಗಳೂರು ಗ್ರಾಮಾಂತರ | 1 | 1 | 2 |
| 2 | ಬೆಂಗಳೂರು ನಗರ | 1 | 1 | 2 |
| 3 | ರಾಮನಗರ | 1 | 1 | 2 |
| 4 | ಚಿಕ್ಕಬಳ್ಳಾಪುರ | 2 | 1 | 3 |
| 5 | ಕೋಲಾರ | 2 | 1 | 3 |
| 6 | ಚಿತ್ರದುರ್ಗ | 2 | 1 | 3 |
| 7 | ದಾವಣಗೆರೆ | 2 | 1 | 3 |
| 8 | ತುಮಕೂರು | 4 | 2 | 6 |
| 9 | ಶಿವಮೊಗ್ಗ | 2 | 1 | 3 |
| 10 | ಮೈಸೂರು | 3 | 2 | 5 |
| 11 | ಚಾಮರಾಜನಗರ | 2 | 1 | 3 |
| 12 | ಮಂಡ್ಯ | 3 | 1 | 4 |
| 13 | ಹಾಸನ | 2 | 2 | 4 |
| 14 | ಚಿಕ್ಕಮಗಳೂರು | 1 | 2 | 3 |
| 15 | ಕೊಡಗು | 1 | 1 | 2 |
| 16 | ಉಡುಪಿ | 1 | 0 | 1 |
| 17 | ದಕ್ಷಿಣ ಕನ್ನಡ | 1 | 0 | 1 |
| 18 | ಕಲಬುರಗಿ | 3 | 2 | 5 |
| 19 | ಯಾದಗೀರ | 1 | 1 | 2 |
| 20 | ಬೀದರ್ | 1 | 1 | 2 |
| 21 | ರಾಯಚೂರು | 2 | 1 | 3 |
| 22 | ಕೊಪ್ಪಳ | 2 | 1 | 3 |
| 23 | ಬಳ್ಳಾರಿ | 1 | 1 | 2 |
| 24 | ಬೆಳಗಾವಿ | 1 | 2 | 3 |
| 25 | ಉತ್ತರಕನ್ನಡ | 1 | 1 | 2 |
| 26 | ವಿಜಯಾಪುರ | 1 | 1 | 2 |
| 27 | ಬಾಗಲಕೋಟೆ | 1 | 1 | 2 |
| 28 | ಧಾರವಾಡ | 2 | 1 | 3 |
| 29 | ಹಾವೇರಿ | 1 | 1 | 2 |
| 30 | ಗದಗ | 2 | 1 | 3 |
| | ಒಟ್ಟು | 50 | 34 | 84 |

28/11/15

**ಷರತ್ತುಗಳು ಮತ್ತು ನಿಂಬಧನೆಗಳು**

1) ಜಿಲ್ಲಾ ಗುಣ ನಿಯಂತ್ರಕರು ಸಾರ್ವಜನಿಕ ಸೇವೆಯ ಧ್ಯೇಯವನ್ನು ಹೊಂದಿರಬೇಕು ಹಾಗೂ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಲು ಆಸಕ್ತಿ ಹೊಂದಿರಬೇಕು.

2) ಸದರಿ ಜಿಲ್ಲಾ ಗುಣ ನಿಯಂತ್ರಕರನ್ನು ತಾಂತ್ರಿಕ ಸಮಿತಿ ಮೂಲಕ ಅವರ ವಿಷಯದ ಜ್ಞಾನ, ಅನುಭವ ಮತ್ತು ಪ್ರಾಮಾಣಿಕತೆ ಆಧಾರಿಸಿ ಆಯ್ಕೆ ಮಾಡಲಾಗುವುದು.

3) ನೇಮಕಾತಿಯಾದ ಜಿಲ್ಲಾ ಗುಣ ನಿಯಂತ್ರಕರು ಮಾಹೆಯಲ್ಲಿ ಸರಿ ಸುಮಾರಾಗಿ 8-10 ದಿನಗಳ ಕ್ಷೇತ್ರ ಭೇಟಿ ನೀಡಿ ಪರಿವೀಕ್ಷಣೆ, ತನಿಖೆಗಳನ್ನು ಈ ಯೋಜನೆಯ ಕಾರ್ಯಸೂಚಿ ಪ್ರಕಾರ ನಿರ್ವಹಿಸಿ ನಿಗಧಿತ ನಮೂನೆಯಲ್ಲಿ ವರದಿಯನ್ನು ಸಲ್ಲಿಸತಕ್ಕದ್ದು, ಈ ವರದಿಗಳನ್ನು 3 ಪ್ರತಿಗಳಲ್ಲಿ ತಯಾರಿಸಿ ಮೊದಲ ಪ್ರತಿಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಮತ್ತು 2 ಮುದ್ರಿತ ಪ್ರತಿಗಳನ್ನು ಸ್ಕಾಫ್ಟ್ ಪ್ರತಿಯೊಂದಿಗೆ ಆಯುಕ್ತಾಯಲಕ್ಕೆ ಸಲ್ಲಿಸತಕ್ಕದ್ದು, ಇದರಲ್ಲಿ ಅವರು ಅಗತ್ಯ ದಾಖಲೆಗಳನ್ನು ಲಗತ್ತಿಸತಕ್ಕದ್ದು, ಹಾಗೂ ತಮ್ಮ ತಾಂತ್ರಿಕವಾದ ಸ್ಪಷ್ಟ ಅಭಿಪ್ರಾಯವನ್ನು ನಮೂದಿಸತಕ್ಕದ್ದು. ಪರಿವೀಕ್ಷಣೆ/ತನಿಖೆ ನಡೆಸಿದ ಬಗ್ಗೆ ಛಾಯಾ ಚಿತ್ರಗಳು ಹಾಗೂ ಮಹಜರ್ ಇತ್ಯಾದಿಗಳನ್ನು ಲಗತ್ತಿಸ ತಕ್ಕದ್ದು, ಸಾಮಾನ್ಯವಾಗಿ ಜಿಲ್ಲಾ ಗುಣ ನಿಯಂತ್ರಕರು ಪರಿವೀಕ್ಷಣೆ/ತನಿಖೆಯ ಸಂಧರ್ಭದಲ್ಲಿ ವಿನ್ಯಾಸ, ತಾಂತ್ರಿಕ ವಿಷಯ, ಅಂದಾಜು ಪ್ರತಿಕೆ ಹಾಗೂ ಬಿಲ್ಲುಗಳ ತಯಾರಿಕೆ ಬಗ್ಗೆ ತಮ್ಮ ಅನುಭವನ್ನು ಹಂಚಿಕೊಳ್ಳುವುದರಲ್ಲಿ ಮಾರ್ಗದರ್ಶನ ನೀಡುವುದು.

4) ಆಯ್ಕೆಯಾಗುವ ಜಿಲ್ಲಾ ಗುಣ ನಿಯಂತ್ರಕರುಗಳು ಭೌತಿಕವಾಗಿ ದೈಹಿಕ ಧೃಡತೆ ಹೊಂದಿರಬೇಕು ಹಾಗೂ ಕ್ಷೇತ್ರ ಮಟ್ಟದ ಭೇಟಿಗೆ ಪ್ರವಾಸ ಕೈಗೊಳ್ಳಲು ಸಮರ್ಥರಾಗಿರಬೇಕು. ಸಂದರ್ಶನ ಸಂದರ್ಭದಲ್ಲಿ ಸರ್ಕಾರಿ ಆಸ್ಪತ್ರೆಯಿಂದ ದೈಹಿಕೆ ದೃಢತೆ ಬಗ್ಗೆ ವೈದ್ಯಕೀಯ ದೃಢೀಕರಣ ಪತ್ರ ಸಲ್ಲಿಸತಕ್ಕದ್ದು. ಜಿಲ್ಲಾ ಗುಣ ನಿಯಂತ್ರರಕರುಗಳ ಆಯ್ಕೆಗೆ ಗರಿಷ್ಠ ವಯೋಮಿತಿ 65 ವರ್ಷಗಳು. 65 ವರ್ಷಗಳ ನಂತರ ಅವರ ಸೇವೆಯನ್ನು ಪಡೆಯಲಾಗುವುದಿಲ್ಲ. ಸದ್ಯಕ್ಕೆ ಈ ನೇಮಕಾತಿಯು ಒಂದು ವರ್ಷಕ್ಕೆ ಸೀಮಿತವಾಗಿದ್ದು, ಅಗತ್ಯ ಸಂದರ್ಭದಲ್ಲಿ ಸಂಬಂಧಿಸಿದ ಜಿಲ್ಲಾ ಗುಣ ನಿಯಂತ್ರಕರುಗಳು ಕಾರ್ಯ ಕ್ಷಮತೆ ಆಧಾರಿಸಿ 2 ಅಥವಾ 3 ವರ್ಷಕ್ಕೆ ಸೇವೆ ವಿಸ್ತರಿಸಲಾಗುವುದು.

5) ಆಯ್ಕೆಯಾಗುವ ಜಿಲ್ಲಾ ಗುಣ ನಿಯಂತ್ರಕರುಗಳ ಮೇಲೆ ಯಾವುದೇ ಇಲಾಖಾ ವಿಚಾರಣೆ/ಶಿಸ್ತು ಪ್ರಕರಣಗಳು ಇರತಕ್ಕದ್ದಲ್ಲ. (ಈ ಕುರತಿ ಸ್ವಯಂ ಅಚಿತ ಹೇಳಿಕೆಯನ್ನು ಇದರೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ಸಲ್ಲಿಸತಕ್ಕದ್ದು)

6) ಅರ್ಹ ಅಭ್ಯರ್ಥಿಗಳು ಮೇಲಿನ ಕೋಷ್ಟಕದಲ್ಲಿರುವ ತಮಗೆ ಆಸಕ್ತಿ ಇರುವ ಆದ್ಯತೆ ಮೇಲೆ 3 ಜಿಲ್ಲೆಯ ಹೆಸರನ್ನು ನಮೂದಿಸುವುದು

7) ಆಯ್ಕೆಯಾಗುವ ಜಿಲ್ಲಾ ಗುಣನಿಯಂತ್ರಕರು ಪ್ರತಿ ದಿನಕ್ಕೆ ರೂ.2,500/ಗಳ ಪರಿವೀಕ್ಷಣೆ ಭತ್ಯೆ, ರೂ.100/ಗಳ ವರದಿ ಭತ್ಯೆಯನ್ನು ಹಾಗೂ ಗರಿಷ್ಠ ಮಾಹೆ ರೂ.3,000/ ಮೀರದಂತೆ ಪ್ರಯಾಣ ಭತ್ಯೆಗೆ ಅರ್ಹರಾಗಿರುತ್ತಾರೆ.

8) ಜಿಲ್ಲಾ ಗುಣನಿಯಂತ್ರಕರು ಸಾಮಾನ್ಯವಾಗಿ ತಮಗೆ ಹಂಚಿಕೆಯಾದ ಜಿಲ್ಲೆಯ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ವಾಸವಾಗಿರುತ್ತಾರೆಂದು ಪರಿಗಣಿಸಿ ಅವರ ಪ್ರಯಾಣ ಭತ್ಯೆಯನ್ನು ಲೆಕ್ಕಚಾರ ಮಾಡಲಾಗುವುದು.

9) ಜಿಲ್ಲಾ ಗುಣನಿಯಂತ್ರಕರು, ಗ್ರಾಮೀಣ ರಸ್ತೆ ನಿರ್ಮಾಣ ಮತ್ತು ಅದಕ್ಕೆ ಸಂಬಂಧಿಸಿದ ವಿನ್ಯಾಸ ಕಾಮಗಾರಿ, ಸಣ್ಣ ಕೆರೆಗಳ ನಿರ್ಮಾಣ, ಕಟ್ಟಡಗಳ ನಿರ್ಮಾಣ, ಬಿಲ್ಲುಗಳ ತಯಾರಿಕೆ, ಸಿವಿಲ್ ಇಂಜನಿಯರಿಂಗ್ ಗಳ ಕೆಲಸ ನಿರ್ವಹಣೆ ಹಾಗೂ ಕಟ್ಟಡ ನಿರ್ಮಾಣ ಸಾಮಗ್ರಿಗಳ, ಇತ್ಯಾದಿ ವಿಷಯಗಳಲ್ಲಿ ಅನುಭವ ಹೊಂದಿರತಕ್ಕದ್ದು.

10) ಜಿಲ್ಲಾ ಗುಣ ನಿಯಂತ್ರಕರ ಆಯ್ಕೆಗೆ ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ/ರಕ್ಷಣಾ ಸೇವೆ/ಗಡಿ ರಸ್ತೆ ಸಂಸ್ಥೆಗಳು/ ರಾಜ್ಯ ಅಥವಾ ಕೇಂದ್ರ ಸರ್ಕಾರ ಸ್ವಾಮ್ಯದ ಸಂಸ್ಥೆಗಳಿಂದ ನಿವೃತ್ತರಾದ ಇಂಜಿನಿಯರಿಂಗ್‌ಗಳು ಅರ್ಹರಾಗಿರುತ್ತಾರೆ.

11) ಸಿವಿಲ್ ಇಂಜಿನಿಯರಿಂಗ್ ಜಿಲ್ಲಾ ಗುಣ ನಿಯಂತ್ರಕರ ಆಯ್ಕೆಗೆ ಕನಿಷ್ಠ 15 ವರ್ಷ ಸರ್ಕಾರಿ ಇಲಾಖೆ ಅಥವಾ ಸರ್ಕಾರಿ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸಿ, ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಥವಾ ಅದರ ಮೇಲ್ಪಟ್ಟ ನಿವೃತ್ತ ಇಂಜಿನಿಯರ್‌ಗಳು ಅರ್ಹರಾಗಿರುತ್ತಾರೆ.

12) ಅರಣ್ಯ /ಕೃಷಿ/ ತೋಟಗಾರಿಕೆ ಜಿಲ್ಲಾ ಗುಣ ನಿಯಂತ್ರಕರುಗಳ ಆಯ್ಕೆಗೆ ಕನಿಷ್ಠ 15 ವರ್ಷ ಸರ್ಕಾರಿ ಇಲಾಖೆ ಅಥವಾ ಸರ್ಕಾರಿ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸಿ ನಿವೃತ್ತಿರಾದ ಉಪ ಅರಣ್ಯ ಸಂರಕ್ಷಣ ಅಧಿಕಾರಿ ಅಥವಾ ಮೇಲ್ಪಟ್ಟ, ಕೃಷಿ ಜಂಟಿ ನಿರ್ದೇಶಕರು ಅಥವಾ ಮೇಲ್ಪಟ್ಟ, ತೋಟಗಾರಿಕೆ ಉಪ ನಿರ್ದೇಶಕರು ಅಥವಾ ಮೇಲ್ಪಟ್ಟ ಹುದ್ದೆಯ ಅಧಿಕಾರಿಗಳು ಅರ್ಹರಾಗಿರುತ್ತಾರೆ.

13) ಜಿಲ್ಲಾ ಗುಣ ನಿಯಂತ್ರಕರ ಆಯ್ಕೆ ಸಂಬಂಧ ಅರ್ಜಿಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವು ಸಂಪೂರ್ಣ ಹಕ್ಕು ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ಇವರಲ್ಲಿ ಕಾಯ್ದಿರಿಸಲಾಗಿದೆ.

14) ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಎಲ್ಲಾ ದಾಖಲೆಯೊಂದಿಗೆ ನೇರ ಸಂದರ್ಶನದ ಸಂಧರ್ಭದಲ್ಲಿ ಸಲ್ಲಿಸತಕ್ಕದ್ದು.

15) ಆಯ್ಕೆಯಾದ ಜಿಲ್ಲಾ ಗುಣ ನಿಯಂತ್ರಕರುಗಳು ಇಲಾಖೆಯೊಂದಿಗೆ ಸೇವಾ ಒಪ್ಪಂದ (Service level agreement) ಮಾಡಿಕೊಳ್ಳತಕ್ಕದ್ದು.

16)ಆಯ್ಕೆಯಾದ ಗುಣ ನಿಯಂತ್ರಕರುಗಳು ಸೇವೆಯಿಂದ ಮುಕ್ತತೆ (Empanelment) ಹೊಂದಲು ಹೆಚ್ಚಿಸಿದ್ದಲ್ಲಿ ಇಲಾಖೆ ಒಂದು ತಿಂಗಳು ಮುಂಚೆ ನೋಟೀಸ್ ನೀಡತಕ್ಕದ್ದು.

17) ಇಲಾಖೆಯಲ್ಲಿ ಈಗಾಗಲೇ ಎಂಪ್ಯಾನೆಲ್ ಆಗಿ ಕಾರ್ಯನಿರ್ವಹಿಸುತ್ತಿರುವ ಡಿಕ್ಯೂಎಂಗಳು ಸೇರಿದಂತೆ ಒಟ್ಟು 100 ಮಂದಿ ಜಿಲ್ಲಾ ಗುಣ ನಿಯಂತ್ರಕರುಗಳನ್ನು ಎಂಪ್ಯಾನಲ್ ಮಾಡಿಕೊಳ್ಳಲಾಗುವುದು. ಈಗಾಗಲೇ ಎಂಪ್ಯಾನೆಲ್ ಆದವರು ಮರು ಅರ್ಜಿ ಸಲ್ಲಿಸಬೇಕಾಗಿಲ್ಲ ಅವರಿಗೆ ಚರ್ಚೆ ಮೂಲಕ ಜಿಲ್ಲಾ ಕೇಂದ್ರ ಸ್ಥಾನ ವಹಿಸಬಹುದಾಗಿದೆ.

18) ಆಯ್ಕೆಯಾದ ಜಿಲ್ಲಾ ಗುಣ ನಿಯಂತ್ರಕರುಗಳನ್ನು ಎಂಪ್ಯಾನಲ್ ಸೇವೆಯಲ್ಲಿ ಅವರ ಸೇವೆಯು ಇಲಾಖೆಗೆ ತೃಪ್ತಿಕರವಾಗಿ ಕಂಡುಬಂದಲ್ಲಿ ಮಾತ್ರ ಸೇವೆಯಲ್ಲಿ ಮುಂದುವರಿಸಲಾಗುವುದು.

19) ಜಿಲ್ಲಾ ಗುಣ ನಿಯಂತ್ರಕರುಗಳನ್ನು ಯಾವುದೇ ಸಂದರ್ಭದಲ್ಲಿ ಎಂಪ್ಯಾನಲ್ ಸೇವೆಯಿಂದ ತೆಗೆದು ಹಾಕಬಹುದಾಗಿದೆ ಮತ್ತು ಸದರಿ ಸೇವೆಯಿಂದ ತೆಗೆದುಹಾಕುವ ಬಗ್ಗೆ ಇಲಾಖೆಯು ಯಾವುದೇ ಕಾರಣಗಳನ್ನು ನೀಡಲಾಗುವುದಿಲ್ಲ.

20) ಜಿಲ್ಲಾ ಗುಣ ನಿಯಂತ್ರಕರುಗಳು ಸಲ್ಲಿಸುವ ವರದಿಗಳು ಕಾನೂನು ಬದ್ಧ ದಾಖಲಾತಿಗಳೆಂದು ಪರಿಗಣಿಸುವುದು. ಸದರಿ ದಾಖಲೆಗಳು ಕಾನೂನಿನ ಪ್ರಕ್ರಿಯೆಗೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಒಳಪಟ್ಟಿರುತ್ತದೆ.

21) ನೇರ ಸಂದರ್ಶನಕ್ಕೆ ನಿಗಧಿತ ನಮೂನೆಗಳನ್ನು ಇಲಾಖಾ ವೈಬ್‌ಸೈಟ್ WWW.end2endnrega.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

22) ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಜಂಟಿ ನಿರ್ದೇಶಕರು(ತಾಂತ್ರಿಕ) ದೂರವಾಣಿ ಸಂ:080-22342162 ಇವರನ್ನು ಸಂಪರ್ಕಿಸಬಹುದಾಗಿದೆ.

ಆಯುಕ್ತರು
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ

## ಮಹಾತ್ಮ ಗಾಂಧಿ ನರೇಗಾ ಅಡಿಯಲ್ಲಿ ಗುಣ ನಿಯಂತ್ರಕರುಗಳ ಎಂಪ್ಯಾನಲ್‌ಮೆಂಟ್‌ಗಾಗಿ

## ಅರ್ಜಿ ನಮೂನೆ

| ಅಭ್ಯರ್ಥಿಯ ಭಾವಚಿತ್ರ |
|---|

1. ಅರ್ಜಿದಾರರ ಹೆಸರು :
2. ತಂದೆ/ಗಂಡನ ಹೆಸರು :
3. ಈಗಿನ ವಾಸದ ವಿಳಾಸ :
4. ಖಾಯಂ ವಿಳಾಸ :
5. ಹುಟ್ಟಿದ ದಿನಾಂಕ ಮತ್ತು ವಯಸ್ಸು (31-12-2014 ರಂತೆ) :
6. ವಿದ್ಯಾರ್ಹತೆ :
7. ಸೇವೆಗೆ ಸೇರಿದ ದಿನಾಂಕ ಮತ್ತು ಹೊಂದಿದ ಹುದ್ದೆ :
8. ಸೇವೆಯಿಂದ ನಿವೃತ್ತಿಯಾದಾಗ ಇದ್ದ ಹುದ್ದೆ :
9. ನಿವೃತ್ತಿಯಾದ ದಿನಾಂಕ :
10. ದೂರವಾಣಿ ಸಂಖ್ಯೆ :
    ಮೊಬೈಲ್ ಸಂಖ್ಯೆ :
    ಇ-ಮೇಲ್ ಐಡಿ :
11. ಗುರಿ ಮತ್ತು ದೃಷ್ಟಿಕೋನ (50 ಪದಗಳು ಮೀರದಂತೆ) (Goal & Vision)
12. ಸೇವಾ ಅನುಭವದ ವಿವರ :

| ಕ್ರ.ಸಂ | ಇಲಾಖೆ | ಹೊಂದಿದ ಹುದ್ದೆ | ಕರ್ತವ್ಯ ಮತ್ತು ಜವಾಬ್ದಾರಿ | ಅವಧಿ | ನಿರ್ವಹಿಸಿದ ಕರ್ತವ್ಯದ ಸೇವಾ ವಿವರ |
|---|---|---|---|---|---|
| 1 | 2 | 3 | 4 | 5 | 6 |

(ಹೆಚ್ಚುವರಿ ಮಾಹಿತಿ ಇದ್ದಲ್ಲಿ ಪ್ರತ್ಯೇಕ ಹಾಳೆಯನ್ನು ಲಗತ್ತಿಸುವುದು)

13. ದೇಹ ದಾರ್ಡ್ಯತೆ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ ಲಗತ್ತಿಸುವುದು.
14. ನಿವೃತ್ತಿ ಹೊಂದಿದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಡೀಕೃತ ಪತ್ರ

### ಘೋಷಣೆ

ನಾನು _________________ ಮೇಲ್ಕಂಡಂತೆ ನೀಡಿರುವ ಮಾಹಿತಿಯು ಸತ್ಯವಾಗಿರುತ್ತದೆ. ತಪ್ಪು ಮಾಹಿತಿ ನೀಡಿದ ಸಂಧರ್ಭದಲ್ಲಿ ಕಾನೂನಿನ ಕ್ರಮಕ್ಕೆ ಒಳಗಾಗುವುದರ ಬಗ್ಗೆ ನನಗೆ ಮನವರಿಕೆಯಾಗಿದೆಯೆಂದು ಘೋಷಿಸುತ್ತೇನೆ.

ನಾನು____________ ಈ ಮೂಲಕ ದೃಡೀಕರಿಸುವುನೇಂದರೆ, ನನ್ನ ವಿರುದ್ಧ ಯಾವುದೇ ಇಲಾಖಾ ವಿಚಾರಣೆ/ಶಿಸ್ತಿನ ಪ್ರಕರಣಗಳು ಇರುವುದಿಲ್ಲವೆಂದು ಮತ್ತು ನನ್ನಿಂದ ಯಾವುದೇ ಬಾಕಿ ಹಣ (ಡಿಸಿಬಿ) ಇರುವುದಿಲ್ಲವೆಂದು ದೃಡೀಕರಿಸುತ್ತೇನೆ.

ನಾನು____________ ಭೌತಿಕವಾಗಿ ದೈಹಿಕ ಧೃಡತೆ ಹೊಂದಿರುವುದಲ್ಲದೇ, ಕ್ಷೇತ್ರ ಮಟ್ಟದ ಭೇಟಿಗೆ ಪ್ರವಾಸ ಕೈಗೊಳ್ಳಲು ಸಮರ್ಥನಾಗಿರುತ್ತೇನೆಂದು ದೃಡೀಕರಿಸುತ್ತೇನೆ,

ಸ್ಥಳ: ಅಭ್ಯರ್ಥಿಯ ಸಹಿ/-

ದಿನಾಂಕ :-